# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

## ಸಿಸಿ ನಂ.511/2017

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಮಳಖೇಡ ಪೊಲೀಸ್ ಠಾಣೆ

-ಃಃ ವಿರುದ್ದ ಃಃ-

ಆರೋಪಿಃ ರುಕ್ಮಿಣಿಬಾಯಿ ಗಂಡ ಗಣೇಶ ಪವಾರ,
ವಃ 27 ವರ್ಷ, ಉಃ ಮನೆಗೆಲಸ,
ಸಾಃ ಸ್ಟೇಷನ್ ತಾಂಡಾ, ನೃಪತುಂಗಾ ನಗರ, ಮಳಖೇಡ.

----

**ದೋಷಾರೋಪಣೆ**

ನಾನು ಶ್ರೀ ಸುನೀಲ್.ಎಸ್.ತಳವಾರ, ಬಿ.ಎ.ಎಲ್ಎಲ್ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 20-03-2017 ರಂದು ಮಧ್ಯಾಹ್ನ 12.00 ಗಂಟೆ ಸುಮಾರಿಗೆ ಮಳಖೇಡ ಠಾಣಾ ಹದ್ದಿಯಲ್ಲಿಯ ಸ್ಟೇಷನ ತಾಂಡಾ-ನೃಪತುಂಗಾ ನಗರದ ಸಾರ್ವಜನಿಕ ರಸ್ತೆಯ ಮೇಲೆ ಚಾಸಾ.1 ನೇದ್ದವಳು ಆರೋಪಿತಳಾದ ನಿನ್ನ ಮನೆಗೆ ಬಂದು ಮಕ್ಕಳ ಜಗಳದ ವಿಚಾರ ಮಾತನಾಡಿ ಹಿಂತಿರುಗಿ ಹೋಗುತ್ತಿದ್ದಾಗ, ಆರೋಪಿತಳಾದ ನೀನು ಚಾಸಾ.1 ನೇದ್ದವಳಿಗೆ ಮುಂದೆ ಹೋಗದಂತೆ ಅಕ್ರಮವಾಗಿ ತಡೆದು ನಿಲ್ಲಿಸಿದ್ದು, ಆ ಮೂಲಕ ಆರೋಪಿತಳಾದ ನೀನು ಭಾ.ದಂ.ಸಂ. 341 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತಳಾದ ನೀನು ಚಾಸಾ-1 ನೇದ್ದವಳಿಗೆ ವಿನಾಕಾರಣ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಹೊಟ್ಟೆಗೆ ಹೊಡೆದು ಗುಪ್ತಗಾಯ ಪಡಿಸಿದ್ದು, ಆ ಮೂಲಕ ಆರೋಪಿತಳಾದ ನೀನು ಭಾ.ದಂ.ಸಂ.504, 323 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತಳಾದ ನೀನು ಚಾಸಾ-1 ನೇದ್ದವಳಿಗೆ ವಿನಾಕಾರಣ ಜಗಳ ತೆಗೆದು, ಸ್ಥಳದಲ್ಲೆ ಬಿದ್ದಿದ್ದ ಕಲ್ಲಿನಿಂದ ಎಡಗಾಲಿನ ಮೊಳಕಾಲಿನ ಕೆಳಗೆ ಹೊಡೆದು ರಕ್ತಗಾಯ ಪಡಿಸಿದ್ದು, ಆ ಮೂಲಕ ಆರೋಪಿತಳಾದ ನೀನು ಭಾ.ದಂ.ಸಂ.324 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

Sd/-

ದಿನಾಂಕಃ 02-08-2021 ಪ್ರ.ದ.ನ್ಯಾ.ದಂ. ಸೇಡಂ.